ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ನಾನು (ಅ) ಪ್ರಶ್ನೆಯಲ್ಲಿ ಕೇಳಿರುವ ಯೋಜನೆಗಳ ಬಗ್ಗೆ ಈಗಾಗಲೇ ಭೂಮಿ ಸರ್ವೆ ಕೂಡ ನಡೆದು ಅದರ ಬಗ್ಗೆ ಸಾಕಷ್ಟು ನೀಲಿ ನಕ್ಷೆಗಳನ್ನು ತಯಾರಿಸಿರುವಾಗ 'ಇಲ್ಲ, ಉದ್ಭವಿಸುವುದಿಲ್ಲ' ಎಂದು ಮಂತ್ರಿಗಳು ಉತ್ತರಿಸಬೇಕಾದರೆ ಬಹುಶಃ ಅವರಿಗೆ ಸತ್ಯಕ್ಕೆ ದೂರವಾದ ಮಾಹಿತಿ ದೊರಕಿರಬಹುದು. ಆದ್ದರಿಂದ. ದಯವಿಟ್ಟು ಇದನ್ನು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಈ ಯೋಜನೆಯಿಂದ ೮ ಹಳ್ಳಿಗಳಿಗೆ ನೀರಾವರಿ ಆಗುತ್ತದೆ. ಕೇವಲ ಒಂದು ಹಳ್ಳಿಯನ್ನು ಗಮನದಲ್ಲಿಟ್ಟುಕೊಂಡು ೮ ಹಳ್ಳಿಗಳಿಗೆ ನೀರಾವರಿ ಆಗುವುದನ್ನು ತಪ್ಪಿಸುವುದು ಬೇಡ. ಬಿಜಾಪುರ ಜಿಲ್ಲೆಯಲ್ಲಿ ಬಾದಾಮಿ ತಾಲ್ಲೂಕು ಅತ್ಯಂತ ಹಿಂದುಳಿದ ತಾಲ್ಲೂಕು. ಅಲ್ಲಿ ಯಾವುದೇ ನೀರಾವರಿಗೆ ಆಸ್ಪದ ಇಲ್ಲ. ಈ ಒಂದು ನೀರಾವರಿ ಯೋಜನೆ ಮಾಡಿಕೊಟ್ಟರೆ ೮ ಹಳ್ಳಿಯ ಜನರಿಗೆ ಅನುಕೂಲವಾಗುತ್ತದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಆ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ ಸಂಶಯ ಇಲ್ಲ. ಆದರೆ ಈ ಆಯವ್ಯಯದಲ್ಲಿ ಹಣ ಒದಗಿಸದೆ ಇರುವುದರಿಂದ ಪ್ರಾರಂಭಿಸಿಲ್ಲ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ. —ಈ ವರ್ಷದ ಆಯವ್ಯಯದಲ್ಲಿ ಅದನ್ನು ಸೇರಿಸುತ್ತೀರಾ ?

ಶ್ರೀ ಆರ್.ಎನ್. ಲಕ್ಷ್ಮೀಪತಿ.—ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಈ ಸಾರಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಸೂಳೆಕೋಟೆ ಬಳಿ ಸೇತುವೆ ನಿರ್ಮಾಣದ ಬಗ್ಗೆ

೫೦ (೬೩) ಶ್ರೀ ಕೆ.ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ). —ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಪಿರಿಯಾಪಟ್ಟಣ ಮತ್ತು ಸೋಮವಾರ ಪೇಟೆಗೆ ಸಂಪರ್ಕವೇರ್ಪಡಿಸುವ ಸೂಳೆಕೋಟೆ ಸೇತುವೆ ಮಂಜೂರಾಗಿದೆಯೆ?

ಆ) ಹಾಗಿದ್ದಲ್ಲಿ ಟೆಂಡರ್ ಆಗಿದೆಯೇ?

ಇ) ಆಗಿದ್ದರೆ, ನಿಧಾನವಾಗುವುದಕ್ಕೆ ಕಾರಣವೇನು ಮತ್ತು ಯಾವಾಗ ಈ ಕೆಲಸ ಮುಕ್ತಾಯವಾಗುತ್ತದೆ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಮಂಜೂರಾಗಿದೆ.

ಆ) ಈ ಕೆಲಸಕ್ಕೆ ಟೆಂಡರ್‌ಗಳು ಬಂದಿದೆ.

ಇ) ಬಂದಿರುವ ಟೆಂಡರ್‌ಗಳು ಪರಿಶೀಲನೆಯಲ್ಲಿವೆ. ಮುಂದಿನ ಕ್ರಮ ಪರಿಶೀಲಿಸಿದ ನಂತರ ಕೈಗೊಳ್ಳಲಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ.—ಅದರ ಜೊತೆಗೆ ಕೆಲವು ಅಂಶಗಳನ್ನು ಹೇಳಬಯಸುತ್ತೇನೆ. ಈ ಯೋಜನೆಗೆ ೪೨ ಲಕ್ಷ ರೂಪಾಯಿ ಮಂಜೂರಾಗಿದೆ. ಮೊದಲು ನಾವು ಮಾರ್ಚ್‌ನಲ್ಲಿ ಟೆಂಡರ್ ಕರೆದಾಗ ಯಾರೂ ಬರಲಿಲ್ಲ ಎರಡನೇ ಸಾರಿ ಕರೆದಾಗ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ನವರು ಅರ್ಜಿ ಹಾಕಿದರು. ಆದರೆ ಅವರು ಶೇಕಡ ೯೨ರಷ್ಟು ಹೆಚ್ಚು ಮೊತ್ತ ಸೂಚಿಸಿದ್ದರಿಂದ ಅವರ ಟೆಂಡರನ್ನು ತಿರಸ್ಕಾರ ಮಾಡಿದೆವು. ಮತ್ತೆ ಮೂರನೇ ಸಾರಿ ಕರೆದಾಗ ೪ ಜನ ಅರ್ಜಿ ಹಾಕಿದರು. ಅದರಲ್ಲಿ, ೧) ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್, ೨) ಮಹಮದ್, ಬೆಳಗಾಂ, ೩) ಮೆಸರ್ಸ್ ಹಿಂದೂಸ್ಥಾನ್ ಲಿಮಿಟೆಡ್ ಮತ್ತು ೪) ಜಯವಾಣ ಸಿಂಧ್ಯ ಎಂಬುವರು ಹಾಕಿದರು. ಅದರ ಬಗ್ಗೆ ತೀರ್ಮಾನ ಕೈಗೊಳ್ಳಲು ೩೦-೧-೮೪ರವರೆಗೆ ಅವಕಾಶ ಇದೆ.

ಶ್ರೀ ಕೆ.ಎಸ್. ಕಾಳಮರಿಗೌಡ. ಈ ಕೆಲಸಕ್ಕೆ ಟೆಂಡರ್ ಬಂದಿದೆ ಎಂದು ಹೇಳಿದಿರಿ. ಮೊದಲು ಕರೆದಾಗಲೂ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಟೆಂಡರ್ ಹಾಕಿತ್ತು ಎಂದು ಹೇಳಿದಿರಿ ಮತ್ತೆ ಈಗಲೂ ಹಾಕಿದೆ ಎಂದು ಹೇಳಿದ್ದೀರಿ. ಅಲ್ಲದೆ ಮೊದಲ ಬಾರಿ ಕರೆದಾಗ ಶೇಕಡ ೯೨ರಷ್ಟು

ಜಾಸ್ತಿ ಹಾಕಿತ್ತು ಎಂದು ಹೇಳಿದಿರಿ. ನಾನು ಏತಕ್ಕೆ ಈ ಪ್ರಶ್ನೆ ಕೇಳುತ್ತಿದ್ದೇನೆಂದರೆ, ಒಂದು ಸಾರಿ ಮುಖ್ಯ ಇಂಜಿನಿಯರ್‌ರವರು ಸೂಳೆಕೋಟೆ ಸೇತುವೆಗೆ ಇನ್‌ಸ್ಪೆಕ್ಷನ್ ಹಾಕಿದ್ದರು. ಆ ಸಂದರ್ಭದಲ್ಲಿ, ಇದಕ್ಕೆ ಫೀಸಿಬಿಲಿಟಿ ಇಲ್ಲವಾದ್ದರಿಂದ ಈ ಕೆಲಸವನ್ನು ನಿಲ್ಲಿಸಿ ಎಂದು ಹೇಳಿದರು. ಆ ಕಾರಣದಿಂದ ನಾನು ಈ ಪ್ರಶ್ನೆ ಕೇಳುತ್ತಿದ್ದೇನೆ. ತಾವು ಇದರ ಬಗ್ಗೆ ಸದನದಲ್ಲಿ ಭರವಸೆ ಕೊಟ್ಟರೆ ಮತ್ತೆ ಪ್ರಶ್ನೆ ಹಾಕುವ ಪ್ರಶ್ನೆ ಬರುವುದಿಲ್ಲ.

ಇದೇ ಸಂದರ್ಭದಲ್ಲಿ ನಾನು ಇನ್ನೊಂದು ಪ್ರಶ್ನೆ ಹಾಕಿದ್ದೇನೆ. ಹಂಸಗಿ ಹತ್ತಿರ ಒಂದು ಸೇತುವೆ ಇದ್ದು ಅಲ್ಲಿ ಟೆಂಡರ್ ಕರೆದಿದ್ದಾರೆ. ಅದನ್ನೂ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿನವರಿಗೇ ಕೊಟ್ಟಿದ್ದರೆ. ಆ ಕೆಲಸ ೧೦ ವರ್ಷಗಳಿಂದ ಆಗದೆ ಹಾಗೆಯೇ ಇದೆ. ಆದ್ದರಿಂದ ಈ ಸೂಳೆಕೋಟೆ ಮತ್ತು ಹಂಸಗಿ ಸೇತುವೆಗಳ ಬಗ್ಗೆ ಮಾನ್ಯ ಮಂತ್ರಿಗಳು ಭರವಸೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ.—ಸೂಳೆಕೋಟೆ ಸೇತುವೆ ಬಗ್ಗೆ ಮಾಹಿತಿಯನ್ನು ನಾನು ಕೊಟ್ಟಿದ್ದೇನೆ. ಹಂಸಗಿ ವಿಷಯ ಪ್ರತ್ಯೇಕ. ಚೀಫ್ ಇಂಜಿನಿಯರ್ ಹೋಗಿ ಅಲ್ಲಿ ಅವಶ್ಯಕತೆ ಇಲ್ಲ ಎಂದು ಹೇಳಿದರು ಎಂದು ಏನು ಹೇಳಿದ್ದಾರೆ ಅದರ ಬಗ್ಗೆ ನನಗೆ ವರದಿ ಬಂದಿಲ್ಲ. ನನ್ನ ಮುಂದೆ ಇರತಕ್ಕ ವರದಿಯನ್ನು ನಾನು ಸದನದ ಗಮನಕ್ಕೆ ತಂದಿದ್ದೇನೆ. ಚೀಫ್ ಇಂಜಿನಿಯರ್ ಆ ರೀತಿ ವರದಿ ಕೊಟ್ಟಿಲ್ಲ.

ಶಿಕಾರಿಪುರ ತಾಲ್ಲೂಕಿನಲ್ಲಿ ಸಾಲೂರು ಹತ್ತಿರ ಕಟ್ಟುತ್ತಿರುವ ಸೇತುವೆಯ ಬಗ್ಗೆ

೮೧ (೫೮) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಶಿಕಾರಿಪುರ ತಾಲ್ಲೂಕು ಸಾಲೂರು ಹತ್ತಿರ ಕಟ್ಟುತ್ತಿರುವ ಸೇತುವೆಯ ಕೆಲಸ ನಿಂತು ಎಷ್ಟು ತಿಂಗಳಾಯಿತು?

ಆ) ಈ ಕೆಲಸ ಮಾಡುತ್ತಿದ್ದ ಕಂಟ್ರಾಕ್ಟರ್ ಆ ಕೆಲಸ ಮಾಡಲು ಸಿದ್ಧವಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಬೇರೆ ಕಂಟ್ರಾಕ್ಟರ್‌ಗೆ ಕೆಲಸ ವಹಿಸಿ ಹಾಲಿ ಕಂಟ್ರಾಕ್ಟರ್ ಮೇಲೆ ಸೂಕ್ತ ಕ್ರಮ ಕೈಗೊಂಡು ಈ ಸೇತುವೆಯ ಕೆಲಸ ಮುಗಿಸಲು ಎಷ್ಟು ಸಮಯ ಬೇಕಾಗುತ್ತದೆ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹಳ್ಳದಲ್ಲಿ ನೀರು ಹರಿಯುತ್ತಿದ್ದುದರಿಂದ ಸದರಿ ಕೆಲಸವನ್ನು ೫ ತಿಂಗಳುಗಳಿಂದ ನಿಲ್ಲಿಸಲಾಗಿತ್ತು.

ಆ) ಇಲ್ಲ. ಸದರಿ ಕೆಲಸವನ್ನು ೩.೧೧.೮೪ ರಿಂದ ಪುನಃ ಪ್ರಾರಂಭ ಮಾಡಿದ್ದಾರೆ.

ಇ) 'ಆ' ಗೆ ಕೊಟ್ಟ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ ಸೇತುವೆ ಕೆಲಸ ಟೆಂಡರ್ ಅಗ್ರಿಮೆಂಟ್ ಪ್ರಕಾರ ೨೮-೨-೧೯೮೫ರ ಹೊತ್ತಿಗೆ ಮುಗಿಯಬೇಕು. ಟೆಂಡರ್ ನಿಗದಿ ಮಾಡಿದಂಥ ಕಾಲದಲ್ಲಿ ಕಾಲವನ್ನು ಸಹ ನಿಗದಿ ಮಾಡಿದ್ದಾರೆ, ಈ ಕೆಲಸವನ್ನು ಐದು ತಿಂಗಳ ಕಾಲ ನಿಲ್ಲಿಸಿದ್ದು ಪುನಃ ಈಗ ಪ್ರಾರಂಭ ಮಾಡಿದ್ದಾರೆ. ಟೆಂಡರ್ ಅಗ್ರಿಮೆಂಟ್ ಅವಧಿ ಪ್ರಕಾರ ಕೆಲಸ ಮುಗಿಸುವುದಕ್ಕೆ ಸರ್ಕಾರ ಪ್ರಯತ್ನಪಡುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.— ಸಾಲೂರು ಸೇತುವೆ ಹತ್ತಿರ ಬಸ್ ಬಿದ್ದು ಮೂರು ಜನರು ಪ್ರಾಣ ತೆತ್ತರು. ಬಸ್ಸಿನಲ್ಲಿ ಪ್ರತಿ ದಿನ ಓಡಾಡಬೇಕಾದರೆ ಜನರು ಪ್ರಾಣ ಹಿಡಿದುಕೊಂಡು ಓಡಾಡುವ ಪರಿಸ್ಥಿತಿ ಬಂದಿದೆ. ಮಳೆಗಾಲ ನಿಂತು ಎರಡು ತಿಂಗಳಾದರೂ ಕಂಟ್ರಾಕ್ಟರ್ ಕೆಲಸ ಮಾಡದೆ ನಿಧಾನ ಮಾಡುತ್ತಿದ್ದಾರೆ. ಆಮೆ ವೇಗದಲ್ಲಿ ಅವರು ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ತಮ್ಮ ಅವಧಿ ಪ್ರಕಾರ ಕೆಲಸ ಪೂರ್ಣ ಮಾಡುವುದಕ್ಕೆ ಸಾರ್ವಜನಿಕ ಹಿತದೃಷ್ಟಿಯಿಂದ ಆದೇಶ ಕೊಡುತ್ತೀರಾ?